# ಸಂಪಾದಕೀಯ

# ಬಹುರೂಪಿ ಶ್ರೀರಾಮಕೃಷ್ಣ

### "ಸರ್ವಶಾಸ್ತ್ರಮರ್ಮದರ್ಶಿ"

ಭಗವದ್ಗೀತೆಯನ್ನು ಉಪನಿಷತ್ತುಗಳೆಂಬ ಹಸುವಿನಿಂದ ಕರೆಯಲ್ಪಟ್ಟ ಹಾಲಿಗೆ ಹೋಲಿಸಲಾಗಿದೆ. ಅಂದರೆ ಉಪನಿಷತ್ತುಗಳ ಸಾರವೇ ಭಗವದ್ಗೀತೆ ಎಂದರ್ಥ. ಶ್ರೀರಾಮಕೃಷ್ಣರಾದರೂ ಇಡೀ ಭಾರತೀಯ ಆಧ್ಯಾತ್ಮಿಕ ಪರಂಪರೆಯ ಸಾರಭೂತರಾಗಿದ್ದಾರೆ. ಉಪನಿಷತ್ತು ಮತ್ತು ಭಗವದ್ಗೀತೆಗಳ ಸಾರವೂ ಅವರಲ್ಲಿದೆ. ಇಡೀ ಆಧ್ಯಾತ್ಮಿಕ ಪರಂಪರೆಯೆಂಬ ಕಾಮಧೇನುವಿನ ಹಾಲು ಅವರು. ಪುರಾಣದ ಕಾಮಧೇನುವು ಸಮುದ್ರಮಥನದ ಸಮಯದಲ್ಲಿ ಕ್ಷೀರ ಸಮುದ್ರದಿಂದ ಜನಿಸಿದುದು. ಹಾಗೆಯೇ ಈ ಕಾಮಧೇನುವು ವೇದ ಸಾಗರದಿಂದ ಉದ್ಭವಿಸಿದುದು. ಇದು ತನ್ನಲ್ಲಿ ಎಲ್ಲ ಸಂಪ್ರದಾಯಗಳನ್ನೂ ಒಳಗೊಳ್ಳುವುದರಿಂದ ಶ್ರೀರಾಮಕೃಷ್ಣರು ಎಲ್ಲ ಸಂಪ್ರದಾಯದವರಿಗೂ ಪ್ರಿಯರಾಗಿದ್ದರು. ಎಲ್ಲರನ್ನೂ ತೃಪ್ತಿಪಡಿಸುತ್ತಿದ್ದರು.

> ಶ್ರೀರಾಮಕೃಷ್ಣರು ತಮ್ಮ ವ್ಯಕ್ತಿತ್ವದಲ್ಲಿ ಎಲ್ಲ ಧಾರ್ಮಿಕ ಮುಂದಾಳುಗಳ ಸಮುಚ್ಚಯವನ್ನು ಪ್ರತಿನಿಧಿಸುತ್ತಾರೆ... ಅವರು ಪೂರ್ಣತೆಯ ಪ್ರತಿರೂಪ.
> —ಶ್ರೀ ಅರವಿಂದ

ಶ್ರೀರಾಮಕೃಷ್ಣರೇ ಹೇಳುತ್ತಿದ್ದರು ಯಾವ ಹಸುವು ಸಿಕ್ಕಿಸಿಕ್ಕಿದುದನ್ನೆಲ್ಲ ತಿನ್ನುವುದೊ ಅದು ಕೊಡಗಟ್ಟಲೆ ಹಾಲು ಕೊಡುತ್ತದೆ ಎಂದು. ಅವರೂ ಎಲ್ಲ ಮತಪಂಥಗಳನ್ನೂ ಎಲ್ಲ ಧರ್ಮಗಳನ್ನೂ ಸ್ವೀಕರಿಸಿದರು, ಅವನ್ನೆಲ್ಲ ತಿಂದು ಜೀರ್ಣಿಸಿಕೊಂಡರು. ಅದರ ಪರಿಣಾಮವಾಗಿ ಅವರು ಉಪದೇಶದ ಮಹಾಪೂರವನ್ನೇ ಹರಿಸಿದರು. ಈ ಉಪದೇಶದ ಕ್ಷೀರ ಜ್ಞಾನಾಗ್ನಿಯಿಂದ ಕುದಿಸಲ್ಪಟ್ಟಿರುವುದರಿಂದ ಯಾವುದೇ ರೀತಿಯ ದುರ್ಗಂಧ ಅದರಲ್ಲಿಲ್ಲ. ಹೀಗೆ ಒಂದು ರೀತಿಯಲ್ಲಿ ಅವರು ಕಾಮಧೇನುವೂ ಹೌದು ಹಾಗೂ ಇನ್ನೊಂದು ರೀತಿಯಲ್ಲಿ ಆ ಕಾಮಧೇನುವಿನ ಹಾಲೂ ಹೌದು. ಇದು ಶುದ್ಧ, ಅಪ್ಪಟ ಹಾಲು, ಅದರಲ್ಲಿ ನೀರಿನ ಬೆರಕೆಯಿಲ್ಲ. ಶ್ರೀರಾಮಕೃಷ್ಣರಲ್ಲಿ ಯಾವುದೇ ರೀತಿಯ ಪ್ರಾಪಂಚಿಕತೆಯ ಸೋಂಕೂ ಇರಲಿಲ್ಲ—ಅದು ಅವರ ಹತ್ತಿರ ಸುಳಿಯುವಂತೆಯೇ ಇರಲಿಲ್ಲ. ಈ ಹಾಲನ್ನು ಜ್ಞಾನಾಗ್ನಿಯಲ್ಲಿ ಕುದಿಸಿ ತ್ಯಾಗವೈರಾಗ್ಯವೆಂಬ ಬೃಹತ್ ಪಾತ್ರೆಯಲ್ಲಿ ಸುಭದ್ರವಾಗಿ ಇರಿಸಲಾಗಿದೆ.

### ಭಾವಸಾಗರ

ಬಂಗಾಳದಲ್ಲಿ ಹಾಲಿನಿಂದ ಸಂದೇಶ್, ರಸಗುಲ್ಲ, ರಸಮಲೈ ಮುಂತಾದ ಅನೇಕಾನೇಕ ಸಿಹಿತಿಂಡಿಗಳನ್ನು ಮಾಡುತ್ತಾರೆ. ಒಂದೊಂದರ ಆಕಾರವೂ ಬೇರೆ, ರುಚಿಯೇ ಬೇರೆ, ಬಣ್ಣವೂ ಬೇರೆ. ಆದರೆ ಸಿಹಿ ಮಾತ್ರ ಎಲ್ಲದಕ್ಕೂ ಸಮಾನ. ಹಾಗೆಯೇ ಶ್ರೀರಾಮಕೃಷ್ಣರೂ ಹಲವು ಭಾವಗಳಲ್ಲಿರುತ್ತಿದ್ದರು. ಒಮ್ಮೆ ವೈಷ್ಣವರಾಗಿ, ಮತ್ತೊಮ್ಮೆ ಶೈವರಾಗಿ, ಇನ್ನೊಮ್ಮೆ ಶಾಕ್ತರಾಗಿ, ಮಗುದೊಮ್ಮೆ ವೇದಾಂತಿಗಳಾಗಿ—ಹೀಗೆ ಅನೇಕಾನೇಕ ಪಾತ್ರಗಳನ್ನು ಅವರು ವಹಿಸುತ್ತಿದ್ದರು. ಒಂದೊಂದು ಭಾವದಲ್ಲಿಯೂ ಅವರ ನಡೆ, ನುಡಿ, ಭಾವಭಂಗಿಗಳು ಬದಲಾಗುತ್ತಿದ್ದವು. ಆದರೆ ಎಲ್ಲದಕ್ಕೂ ಸಾಮಾನ್ಯವಾದ ಅಂಶವೆಂದರೆ ದೈವೀಭಾವ—ದಿವ್ಯಾನಂದದ ಸಿಹಿ. ಅವರೊಡನಿರುವವರೆಲ್ಲರೂ ಆ ಸಿಹಿಯನ್ನು ಸವಿಯುತ್ತಿದ್ದರು. ತಮ್ಮ ಆಧ್ಯಾತ್ಮವ್ಯಕ್ತಿತ್ವದ ಹಾಲಿನಿಂದ ವಿವಿಧ ಭಾವದ ಹಲವು ಸಿಹಿತಿಂಡಿಗಳನ್ನು ತಯಾರಿಸಿ ಭಕ್ತರಿಗೆ ಹಂಚುತ್ತಿದ್ದರು. ಯಾರೂ ಒಂದೇ ಬಗೆಯ ಸಿಹಿತಿಂಡಿಯನ್ನು ತಿಂದು ಬೇಸರಪಟ್ಟುಕೊಳ್ಳುತ್ತಿರಲಿಲ್ಲ. ವಿವಿಧ ಬಗೆಯ ಭಕ್ತರಿಗೆ, ಅವರವರ ಭಾವಕ್ಕನುಗುಣವಾಗಿ, ವಿವಿಧ ಬಗೆಯ ಭಾವರುಚಿಯನ್ನು ನೀಡುತ್ತಿದ್ದರು. ಶೈವ, ಶಾಕ್ತ, ವೈಷ್ಣವ ಮುಂತಾದವರು ತಮ್ಮ ತಮ್ಮ ಭಾವಕ್ಕೆ ಅನುಗುಣವಾಗಿ ಶ್ರೀರಾಮಕೃಷ್ಣರಿಂದ ಸ್ಫೂರ್ತಿಯನ್ನು ಪಡೆಯುತ್ತಿದ್ದರು.

ಶ್ರೀರಾಮಕೃಷ್ಣರೇ ಹೇಳುತ್ತಿದ್ದಂತೆ, ಅವರು ಒಂದೇ ಬಗೆಯ ಧ್ವನಿಯನ್ನು ಹೊರಡಿಸುವ ಶ್ರುತಿವಾದ್ಯದಂತಲ್ಲ, ವಿವಿಧ ರಾಗರಾಗಿಣಿಗಳನ್ನು ಹೊರಡಿಸುವ ವಾದ್ಯದಂತೆ. ಅವರು ಎಂದೂ ಶುಷ್ಕವೇದಾಂತಿಯಂತಿರಲು ಇಷ್ಟಪಡಲಿಲ್ಲ. ಭಕ್ತಿಭಾವದಿಂದ ತುಂಬಿ ತುಳುಕುತ್ತಿದ್ದರು. ಸುತ್ತಲಿನ ಭಕ್ತರು ಆ ರಸದೌತಣದಿಂದ ಹಿಗ್ಗಿ ಆನಂದಿಸುತ್ತಿದ್ದರು. ಹೀಗೆ ಶ್ರೀರಾಮಕೃಷ್ಣರದು ವೈವಿಧ್ಯಮಯ ವ್ಯಕ್ತಿತ್ವ.

### ನಾಮದ ಮಹಿಮೆ

ಶ್ರೀರಾಮಕೃಷ್ಣರು ಮನಸ್ಸನ್ನು ಹಾಲಿಗೆ ಹೋಲಿಸಿ, ಆ ಹಾಲು ಪ್ರಾಪಂಚಿಕತೆಯ ನೀರಿನೊಂದಿಗೆ ಬೆರೆಯಬಾರದೆನ್ನುತ್ತಾರೆ. ಹಾಲಿಗೂ ನೀರಿಗೂ ನಿಕಟ ಸಂಬಂಧ, ಅವು ಚೆನ್ನಾಗಿ



ಯಾರಿಗೆ ಶ್ರದ್ಧೆ ಇದೆಯೊ ಅವನಿಗೆ ಎಲ್ಲವೂ ಇದೆ.
ಯಾರಿಗೆ ಶ್ರದ್ಧೆ ಇಲ್ಲವೊ ಅವನಿಗೆ ಯಾವುದೂ ಇಲ್ಲ.
—ಶ್ರೀರಾಮಕೃಷ್ಣ.

ಹೊಂದಿಕೊಂಡುಬಿಡುತ್ತವೆ—ಅವು ಎಣ್ಣೆ ನೀರಿನಂತಲ್ಲ. ಒಮ್ಮೆ ಅವು ಬೆರೆತರೆ ಅವುಗಳನ್ನು ಬೇರ್ಪಡಿಸುವುದು ಬಹಳ ಕಷ್ಟ. ಬಹಳ ಹೊತ್ತು ಅದನ್ನು ಬೆಂಕಿಯ ಮೇಲಿಟ್ಟು ಕಾಯಿಸಬೇಕಾಗುತ್ತದೆ. ಆದರೆ ಆ ಹಾಲನ್ನು ಬೆಣ್ಣೆಯಾಗಿ ಪರಿವರ್ತಿಸಿದರೆ ಆಗ ಅದನ್ನು ಪ್ರಾಪಂಚಿಕತೆಯ ನೀರಿನಲ್ಲಿ ಇರಿಸಿದರೂ ತೇಲುತ್ತದೆಯೇ ಹೊರತು ಅದರೊಡನೆ ಬೆರೆಯುವುದಿಲ್ಲ—ಎನ್ನುತ್ತಾರೆ ಶ್ರೀರಾಮಕೃಷ್ಣರು.

ಮನಸ್ಸೆಂಬ ಹಾಲನ್ನು ಬೆಣ್ಣೆಯಾಗಿ ಪರಿವರ್ತಿಸುವುದು ಹೇಗೆಂಬುದೇ ಪ್ರಶ್ನೆ. ನಾವು ಹಾಲನ್ನು ಮೊಸರು ಮಾಡಲು ಅದಕ್ಕೆ ಹಳೆಯ ಮೊಸರನ್ನು ಸೇರಿಸುತ್ತೇವೆ. ಹಾಗೆಯೇ ಈ ಮನಸ್ಸಿಗೆ ಭಗವನ್ನಾಮದ ಮೊಸರನ್ನು ಸೇರಿಸಬೇಕು. ಸೇರಿಸಿದ ತಕ್ಷಣ ಅದರಲ್ಲಿ ಯಾವ ಬದಲಾವಣೆಯೂ ಕಾಣಿಸುವುದಿಲ್ಲ. ಕ್ರಮೇಣ, ಆ ಹುಳಿಯು ಹಾಲಿನ ಎಲ್ಲ ಭಾಗವನ್ನು ಆವರಿಸಿ ಹಾಲನ್ನು ಪರಿವರ್ತಿಸುತ್ತದೆ. ಒಂದೇ ಚಮಚ ಮೊಸರು ಹಾಕಿದ್ದರೂ ಅದು ಎಲ್ಲ ಹಾಲನ್ನೂ ಮೊಸರಾಗಿ ಪರಿವರ್ತಿಸುತ್ತದೆ. ಹಾಗೆಯೇ ಈ ನಾಮ ಅತ್ಯಂತ ಚಿಕ್ಕದಾದರೂ ಸುಪ್ತಮನಸ್ಸೂ ಸೇರಿದಂತೆ ಇಡೀ ಮನಸ್ಸನ್ನು ಪರಿವರ್ತಿಸಿಬಿಡುತ್ತದೆ. ಶ್ರೀರಾಮಕೃಷ್ಣರು ಈ ನಾಮವನ್ನು ಬೀಜಕ್ಕೆ ಹೋಲಿಸುತ್ತಾರೆ. ಬೀಜ ಚಿಕ್ಕದಾದರೂ ಬೃಹತ್ ಮರವಾಗಿ ಬೆಳೆಯುವ ಸಾಮರ್ಥ್ಯ ಅದರಲ್ಲಿ ಅಡಗಿರುತ್ತದೆ.

ನಾಮ ಅಥವಾ ಮಂತ್ರವನ್ನು ಲಯಬದ್ಧವಾಗಿ ಉಚ್ಚರಿಸುತ್ತ ಹೋದರೆ ಅದು ಮನಸ್ಸಿನಲ್ಲಿ ಭಗವತ್ಸಂಬಂಧಿಯಾದ ಸ್ಪಂದನವನ್ನು ಸೃಷ್ಟಿಸುತ್ತದೆ. ಈ ಸ್ಪಂದನ ಕ್ರಮೇಣ ಇಡೀ ಮನಸ್ಸನ್ನು ಆವರಿಸಿ ಅದನ್ನು ಭಗವದ್ಭಾವದಿಂದ ತುಂಬಿಬಿಡುತ್ತದೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರು ನಾಮಜಪಕ್ಕೆ ಹೆಚ್ಚು ಪ್ರಾಮುಖ್ಯವನ್ನು ನೀಡುತ್ತಿದ್ದರು. ಆದರೆ ನಾವು ತಾಳ್ಮೆಯಿಂದ ದೀರ್ಘಕಾಲ ನಾಮೋಚ್ಚಾರಣೆ ಮಾಡುತ್ತ ಹೋಗಬೇಕು, ಬೇಗನೆ ಪರಿಣಾಮವನ್ನು ನಿರೀಕ್ಷಿಸಬಾರದು. ಶ್ರೀರಾಮಕೃಷ್ಣರು ಹೇಳುತ್ತಾರೆ: "ಭಗವನ್ನಾಮ ನಿಜವಾಗಿಯೂ ಶಕ್ತಿಯಿಂದ ಕೂಡಿರುವುದು. ಆದರಿಂದ ತಕ್ಷಣವೇ ಪ್ರತಿಫಲ ಸಿಕ್ಕದೆ ಇರಬಹುದು. ಆದರೆ ಒಂದಲ್ಲ ಒಂದು ದಿನ ಅದು ಫಲವನ್ನು ಕೊಟ್ಟೇ ತೀರುತ್ತದೆ. ಮನೆಯ ಗೋಡೆಯ ಮೇಲೆ ಬಿದ್ದ ಬೀಜ ಬಹುಶಃ ಕಟ್ಟಡ ಕುಸಿದು ನೆಲಕ್ಕುರುಳಿದಮೇಲೆ ಮಣ್ಣನ್ನು ಸೇರಿ ಮೊಳೆತು ಮರವಾಗಿ ಫಲವನ್ನು ಕೊಡುತ್ತದೆ."

## ತಾಳ್ಮೆ ಮತ್ತು ಶ್ರದ್ಧೆ

ನಾವು ಹಾಲಿಗೆ ಹೆಪ್ಪುಹಾಕಿ ಅದನ್ನು ಒಂದು ಮೂಲೆಯಲ್ಲಿ ಇಟ್ಟಿರುತ್ತೇವೆ. ಅದನ್ನು ಕಲಕಬಾರದು, ಅಲುಗಾಡಿಸಬಾರದು, ಮೊಸರಾಯಿತೆ ಇಲ್ಲವೆ ಎಂದು ಮತ್ತೆ ಮತ್ತೆ ಪರೀಕ್ಷಿಸಿ ನೋಡಬಾರದು. ಹಾಗೆ ಮಾಡಿದರೆ ಸರಿಯಾಗಿ ಮೊಸರಾಗುವುದಿಲ್ಲ. ಹಾಗೆಯೇ ಮನಸ್ಸಿಗೆ ಭಗವನ್ನಾಮವನ್ನು ಸೇರಿಸಿದಮೇಲೆ ಅದನ್ನು ಅಸಹನೆಯಿಂದ ಕಲಕಬಾರದು, ಸಂದೇಹದಿಂದ ಅಲುಗಾಡಿಸಬಾರದು ಮತ್ತು ಆತುರತೆಯಿಂದ ಮತ್ತೆ ಮತ್ತೆ ಪರೀಕ್ಷಿಸುತ್ತ ಹೋಗಬಾರದು. ಇದರಿಂದ ಮನಸ್ಸು ಚಂಚಲವಾಗಿ ಪರಿವರ್ತನೆ ತಡವಾಗುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಾರೆ : "ಬೆಣ್ಣೆ ತೆಗೆಯಬೇಕಾದರೆ ಮೊದಲು ನಿರ್ಜನ ಪ್ರದೇಶದಲ್ಲಿ ಹಾಲಿಗೆ ಹೆಪ್ಪುಹಾಕಿ ಇಡಬೇಕು. ಅದನ್ನು ಅತಿಯಾಗಿ ಕದಲಿಸುತ್ತಿದ್ದರೆ ಅದು ಮೊಸರಾಗದು. ಬಳಿಕ ಉಳಿದ ಎಲ್ಲ ಕಾರ್ಯಗಳನ್ನೂ ಒಂದು ಮೂಲೆಯಲ್ಲಿ ಕಟ್ಟಿಟ್ಟು, ನಿರ್ಜನ ಪ್ರದೇಶದಲ್ಲಿ ಕೂತು ಅದನ್ನು ಕಡೆಯಬೇಕು. ಆಗ ಬೆಣ್ಣೆ ತೆಗೆಯಲು ಸಾಧ್ಯವಾಗುತ್ತದೆ."

ಆದ್ದರಿಂದ ಆಧ್ಯಾತ್ಮಿಕ ಜೀವನದಲ್ಲಿ ತಾಳ್ಮೆ ಅತ್ಯಂತ ಮುಖ್ಯ. ತಾಳ್ಮೆಯಿಲ್ಲದವರು ಒಂದಾದಮೇಲೆ ಒಂದರಂತೆ ಬೇರೆ ಬೇರೆ ಸಾಧನಾವಿಧಾನಗಳನ್ನು ಅನುಸರಿಸುತ್ತ ಹೋಗುತ್ತಾರೆ. ಕೊನೆಗೆ ಯಾವುದರಿಂದಲೂ ಪ್ರಯೋಜನವಾಗದೆ ನಿರಾಸೆಗೊಳಗಾಗುತ್ತಾರೆ. ಇಂಥವರನ್ನು ಶ್ರೀರಾಮಕೃಷ್ಣರು ನೀರಿಗಾಗಿ ಬೇರೆ ಬೇರೆ ಕಡೆ ಬಾವಿ ತೋಡುವವರಿಗೆ ಹೋಲಿಸುತ್ತಿದ್ದರು. ಅವರು ಒಂದು ಕಡೆ ಸ್ವಲ್ಪ ಅಗೆದು ನೀರು ಸಿಗಲಿಲ್ಲವೆಂದು ಮತ್ತೊಂದು ಕಡೆ ಅಗೆಯುತ್ತಾರೆ. ಅಲ್ಲೂ ಸ್ವಲ್ಪ ಅಗೆದು ಇನ್ನೊಂದು ಕಡೆ ಅಗೆಯುತ್ತಾರೆ. ಹೀಗೇ ಮುಂದುವರಿಯುತ್ತದೆ. ಅದರ ಬದಲು ಅಷ್ಟೇ ಅಗೆಯುವ ಕಾರ್ಯವನ್ನು ಒಂದೇ ಕಡೆ ಮಾಡಿದರೆ ನೀರು ಸಿಕ್ಕುವುದು ಖಂಡಿತ. ಆದ್ದರಿಂದ ಶ್ರೀರಾಮಕೃಷ್ಣರು ಏಕನಿಷ್ಠೆಗೆ ಹೆಚ್ಚು ಪ್ರಾಧಾನ್ಯವನ್ನು ನೀಡುತ್ತಿದ್ದರು.

ಹಾಲಿಗೆ ಹೆಪ್ಪು ಹಾಕುವುದಕ್ಕೆ ಮುಂಚೆ ಅದನ್ನು ಕಾಯಿಸುತ್ತೇವೆ. ಆಗ ಅದರಲ್ಲಿರುವ ದುರ್ಗಂಧವೆಲ್ಲ ಹೊರಟುಹೋಗುತ್ತದೆ. ಹಾಗೆಯೇ ಮನಸ್ಸನ್ನೂ ಜ್ಞಾನಾಗ್ನಿಯಿಂದ ಕಾಯಿಸಬೇಕು. ಅಂದರೆ ಆಧ್ಯಾತ್ಮಿಕ ಜೀವನದ ಬಗ್ಗೆ ವಿಚಾರಪೂರ್ಣವಾದ ತಿಳಿವಳಿಕೆ ಇರಬೇಕು. ವಿಚಾರದ ಮೂಲಕ ಮನದಲ್ಲಿರುವ ಮತಾಂಧತೆ, ಗೊಡ್ಡು ಸಾಂಪ್ರದಾಯಿಕತೆ, ಮೂಢನಂಬಿಕೆಗಳು, ತಪ್ಪು ಕಲ್ಪನೆಗಳು ಇವೆಲ್ಲವನ್ನೂ ತೊಡೆದುಹಾಕಬೇಕು. ಆಗ ಮನಸ್ಸು ನಿಜವಾದ ಆಧ್ಯಾತ್ಮಿಕ ಸ್ಪಂದನವನ್ನು ಸ್ವೀಕರಿಸಲು ಅರ್ಹವಾಗುತ್ತದೆ. ಹಾಲು ತುಂಬ ಬಿಸಿಯಾಗಿದ್ದರೆ ಒಡೆದುಹೋಗುತ್ತದೆ—ಮೊಸರಾಗುವುದಿಲ್ಲ. ಹಾಗೆಯೇ ಅತಿಯಾದ ವಿಚಾರದಿಂದಲೂ ಮನಸ್ಸು ಸಂದೇಹದಿಂದ ಒಡೆದು ಛಿದ್ರವಾಗುತ್ತದೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರು ವಿಚಾರದ ಅತಿರೇಕವನ್ನು ಖಂಡಿಸುತ್ತಿದ್ದರು, ಮತ್ತು ಶ್ರದ್ಧೆಗೆ ಒತ್ತನ್ನು ನೀಡುತ್ತಿದ್ದರು.

## ಧ್ಯಾನದಿಂದ ಮನಸ್ಸು ಸಾತ್ತ್ವಿಕವಾಗುತ್ತದೆ

ಈಗ ಹಾಲು ಮೊಸರಾಗಿ ಬೆಣ್ಣೆ ತೆಗೆಯಲು ಸಿದ್ಧವಾಗಿದೆ. ಒಂದು ಕಡಗೋಲಿನ ಮೂಲಕ ಅದನ್ನು ಚೆನ್ನಾಗಿ ಕಡೆದಾಗ ಬೆಣ್ಣೆ ಮೇಲೆದ್ದು ಬರುತ್ತದೆ. ಹಾಗೆಯೇ ಮನಸ್ಸು ಸುದೀರ್ಘ ಮಂತ್ರಜಪ ಸಾಧನೆಯ ಮೂಲಕ ಹಳೆಯ ಸಂಸ್ಕಾರಗಳಿಂದ ನಿರ್ಮುಕ್ತವಾಗಿ ಪರಿಪಕ್ವವಾಗುತ್ತದೆ. ಈಗ ಅದನ್ನು ಧ್ಯಾನದ ಮೂಲಕ ಚೆನ್ನಾಗಿ ಕಡೆಯಬೇಕು. ಆಗ ಅದು ಬೆಣ್ಣೆಯಾಗಿ ಪರಿವರ್ತನಗೊಳ್ಳುತ್ತದೆ. ಧ್ಯಾನವೆಂದರೆ ಒಂದೇ ದಿವ್ಯವಸ್ತುವನ್ನು ಕುರಿತು ಚಿಂತಿಸುವುದು ಮತ್ತು ಅದಕ್ಕಿಂತ ಬೇರೆಯಾದ ಚಿಂತನೆಗಳನ್ನೆಲ್ಲ ತೊಡೆದುಹಾಕುವುದು. ಈ ರೀತಿ ಏಕತತ್ತ್ವಾಭ್ಯಾಸದಿಂದ ಮನಸ್ಸು ಸತ್ತ್ವಪ್ರಧಾನವಾಗುತ್ತದೆ. ಈ ಸತ್ತ್ವಪ್ರಧಾನ ಸ್ಥಿತಿಯನ್ನೇ ಬೆಣ್ಣೆ ಎಂದು ಕರೆಯುವುದು. ಇದು ಸತ್ತ್ವಪ್ರಧಾನವಾದುದರಿಂದ ತೇಲುತ್ತದೆ. ತಮಃಪ್ರಧಾನವಾಗಿದ್ದಿದ್ದರೆ ಮುಳುಗುತ್ತಿತ್ತು ಮತ್ತು ರಜಃಪ್ರಧಾನವಾಗಿದಿದ್ದರೆ ನೀರಿನೊಡನೆ ಬೆರೆತುಹೋಗುತ್ತಿತ್ತು. ಆದ್ದರಿಂದ ಮನಸ್ಸನ್ನು ಸಾತ್ತ್ವಿಕಗೊಳಿಸಿದರೆ ಅದು ಪ್ರಾಪಂಚಿಕ ನೀರಿನೊಂದಿಗೆ ಬೆರೆಯುವುದಿಲ್ಲ, ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತದೆ.

ಬೆಣ್ಣೆ ತುಂಬ ಮೃದುವಾಗಿರುವಂತೆ ಸತ್ತ್ವಪ್ರಧಾನವ್ಯಕ್ತಿಯೂ ಮೃದುವಾಗಿರುತ್ತಾನೆ, ಆದರೂ ಯಾವುದೇ ಪ್ರಭಾವಕ್ಕೂ ಒಳಗಾಗದೆ ಇರುತ್ತಾನೆ. ಆಧ್ಯಾತ್ಮಿಕ ಜೀವನದಲ್ಲಿ ಮೃದುತ್ವ ಮತ್ತು ಗಟ್ಟಿತನಗಳೆರಡನ್ನೂ ಉಳಿಸಿಕೊಳ್ಳುವುದು ಆವಶ್ಯಕ. ಶ್ರೀರಾಮಕೃಷ್ಣರು ಹೇಳುತ್ತಾರೆ: "ನೂರಾರು ವರ್ಷಗಳು ಚಕಮಕಿಯ ಕಲ್ಲು ನೀರಿನಲ್ಲಿ ಮುಳುಗಿರಬಹುದು. ಆದರೂ ಅದು ತನ್ನ ಸ್ವಭಾವವನ್ನು ಕಳೆದುಕೊಳ್ಳುವುದಿಲ್ಲ. ಬೇಕಾದಾಗ ಅದನ್ನು ಉಕ್ಕಿನಿಂದ ಹೊಡೆಯಿರಿ, ತಕ್ಷಣವೇ ಕಿಡಿ ಏಳುವುದು. ಇದರಂತೆಯೇ ನಿಜವಾದ ಭಕ್ತನಲ್ಲಿರುವ ಶ್ರದ್ಧೆಯೂ ಕೂಡ ಅಚಲವಾದುದು. ಅವನು ಹೀನವಾದ ಪ್ರಾಪಂಚಿಕ ವಸ್ತುಗಳಿಂದ ಸುತ್ತಲೂ ಆವರಿಸಿಕೊಂಡಿದ್ದರೂ, ದೇವರಲ್ಲಿ ಶ್ರದ್ಧೆ ಮತ್ತು ಪ್ರೀತಿಯನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ. ದೇವರ ಹೆಸರನ್ನು ಕೇಳಿದೊಡನೆಯೇ ಅವನು ಉತ್ಸಾಹದಿಂದ ಜಾಗೃತನಾಗುವನು."

ಶ್ರೀಕೃಷ್ಣನಿಗೆ ಬೆಣ್ಣೆ ಅತ್ಯಂತ ಪ್ರಿಯವಾಗಿತ್ತು, ಅದನ್ನು ಕದ್ದಾದರೂ ತಿನ್ನುತ್ತಿದ್ದನು. ಅಂದರೆ ದೇವರಿಗೆ ಸತ್ತ್ವ ಪ್ರಿಯ. ಅವನು ಸಾತ್ತ್ವಿಕ ಭಕ್ತರನ್ನು ಅತ್ಯಂತ ಮೆಚ್ಚುತ್ತಾನೆ. ಚಿಕ್ಕ ಮಕ್ಕಳು ಬೆಣ್ಣೆಯನ್ನು ಇಷ್ಟಪಡುವುದೂ ಬಹುಶಃ ಅವರಲ್ಲಿ ಸತ್ತ್ವಗುಣ ಪ್ರಧಾನವಾಗಿರುವುದರಿಂದ. ಶ್ರೀರಾಮಕೃಷ್ಣರೂ ಸತ್ತ್ವಗುಣಪ್ರಧಾನರಾಗಿದ್ದರು. ಅವರ ದೇಹವೂ ಬೆಣ್ಣೆಯಂತೆ ಅತ್ಯಂತ ಮೃದುವಾಗಿತ್ತೆಂಬುದನ್ನು ನಾವು ಓದುತ್ತೇವೆ. ಅಷ್ಟೇ ಅಲ್ಲದೆ ಅವರು ಗುಣಾತೀತರೂ ಆಗಿದ್ದರು.

> **ಅಯಸ್ಕಾಂತದಂತೆ ಶ್ರೀರಾಮಕೃಷ್ಣರು ನಿಷ್ಠಾವಂತ ಶಿಷ್ಯರನ್ನು ತಮ್ಮೆಡೆಗೆ ಆಕರ್ಷಿಸಿದರು... ಅಂಥ ನೂರಾರು ಜನರು ಅವರನ್ನು ನೋಡುವುದರ ಮೂಲಕ ಮತ್ತು ಅವರೊಡನೆ ಮಾತನಾಡುವುದರ ಮೂಲಕ ಸಮಾಧಾನವನ್ನೂ ಧನ್ಯತೆಯನ್ನೂ ಪಡೆದಿರುವರು. —*ಮಹಮ್ಮದ್‌ದಾ ಉದ್ ರಹಬಾರ್.***

## ಗುಣಾತೀತಾವಸ್ಥೆ

ಬೆಣ್ಣೆಯೇ ಕೊನೆಯ ಹಂತವಲ್ಲ, ಅದನ್ನು ಕಾಯಿಸಿ ತುಪ್ಪ ಮಾಡುತ್ತಾರೆ. ಆ ರೀತಿ ಕಾಯಿಸುವಾಗ ಅದರಲ್ಲಿರುವ ಅಲ್ಪ ಸ್ವಲ್ಪ ನೀರಿನ ಅಂಶವೂ ಹೋಗುತ್ತದೆ ಮತ್ತು ಅದಕ್ಕೆ ಹೊಸ ರೂಪ ಮತ್ತು ರುಚಿ ಬರುತ್ತದೆ. ಸಾಧಕನ ದೃಷ್ಟಿಯಲ್ಲಿ ಇದು ಸತ್ತ್ವವನ್ನೂ ಮೀರಿದ ಸ್ಥಿತಿ—ಗುಣಾತೀತಾವಸ್ಥೆ. ಶ್ರೀರಾಮಕೃಷ್ಣರು ಹೇಳುತ್ತಾರೆ, ಬೆಣ್ಣೆಯನ್ನು ಕಾಯಿಸುವಾಗ ಮೊದಮೊದಲು ತುಂಬ ಶಬ್ದ ಮಾಡುತ್ತದೆ, ಅನಂತರ ನೀರಿನ ಅಂಶವೆಲ್ಲ ಹೊರಟುಹೋದಮೇಲೆ ಎಲ್ಲ ಶಾಂತವಾಗಿಬಿಡುತ್ತದೆ, ಎಂದು. ಹಾಗೆಯೇ ಸಮಾಧಿಯ ಅಗ್ನಿಯಲ್ಲಿ ಕಾಯಿಸಿದ ಮನಸ್ಸು ವಾಸನೆಗಳಿಂದ ಸಂಪೂರ್ಣ ಮುಕ್ತವಾಗಿ ಗುಣಾತೀತಾವಸ್ಥೆಯನ್ನು ಮುಟ್ಟುತ್ತದೆ. ತುಪ್ಪವನ್ನು ಬಹಳ ಕಾಲ ಇಡಬಹುದು, ಅನೇಕರು ಅದರ ಪ್ರಯೋಜನವನ್ನು ಪಡೆಯಬಹುದು, ಅನೇಕ ಬಗೆಯ ಪದಾರ್ಥಗಳನ್ನು ಅದರಿಂದ ತಯಾರಿಸಬಹುದು. ಹಾಗೆಯೇ ಗುಣಾತೀತನೂ ಎಲ್ಲರನ್ನೂ ಸಂತೋಷಪಡಿಸುತ್ತಾನೆ. ತನ್ನ ಪರಿಮಳವನ್ನು ಬಹುದೂರ ಹರಡಿ ಭಕ್ತರನ್ನೂ ಸಾಧಕರನ್ನೂ ತನ್ನೆಡೆಗೆ ಆಕರ್ಷಿಸುತ್ತಾನೆ, 'ಸ್ನೇಹ'(ತುಪ್ಪದಲ್ಲಿರುವ ಜಿಡ್ಡಿನ ಅಂಶ)ದಿಂದ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳುತ್ತಾನೆ. ಅನೇಕ ಬಗೆಯ ಸಾಧಕರು ಅವನ ಜೀವನದಿಂದ ಪ್ರಯೋಜನ ಪಡೆದು ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳುತ್ತಾರೆ.

## ಪರಮಹಂಸವೃತ್ತಿ

ಶ್ರೀರಾಮಕೃಷ್ಣರಂತಹ ಅವತಾರ ಪುರುಷರು ಮನಸ್ಸೆಂಬ ಹಾಲು ಪ್ರಾಪಂಚಿಕತೆಯ ನೀರಿನಿಂದ ಬೆರೆತಿದ್ದರೂ ಅದನ್ನು ಪ್ರತ್ಯೇಕಿಸ

ಬಿಟ್ಟರು. ಆದ್ದರಿಂದಲೇ ಅವರನ್ನು ಪರಮಹಂಸರೆಂದು ಕರೆಯುವುದು. ಹಂಸಕ್ಷೀರನ್ಯಾಯದ ಪ್ರಕಾರ, ಹಾಲು ನೀರಿನಿಂದ ಬೆರೆತಿದ್ದರೂ ನೀರನ್ನು ಬಿಟ್ಟು ಹಾಲನ್ನು ಮಾತ್ರ ಹೀರಿಕೊಳ್ಳುವ ಸಾಮರ್ಥ್ಯ ಹಂಸಕ್ಕಿದೆ. ಶ್ರೀರಾಮಕೃಷ್ಣರು ಸಾಮಾನ್ಯ ಹಂಸವಲ್ಲ, ಪರಮಹಂಸರು. ಅವರು ಅನೇಕ ಸಾಧಕರ ಮನಸ್ಸನ್ನು ಪ್ರಾಪಂಚಿಕತೆಯಿಂದ ಬೇರ್ಪಡಿಸಿ ಸಾಧನಾಮಾರ್ಗದಲ್ಲಿ ತೊಡಗಿಸಿದರು. ತಮ್ಮ ಅಪೂರ್ವ ಉಪದೇಶಗಳ ಮೂಲಕ, ಮಾರ್ಗದರ್ಶನದ ಮೂಲಕ ಮತ್ತು ತಮ್ಮ ಅಸಾಧ್ಯ ಆಧ್ಯಾತ್ಮಿಕ ಶಕ್ತಿಯ ಮೂಲಕ ಅವರು ತಮ್ಮ ಭಕ್ತರ ಮನಸ್ಸನ್ನು ಪ್ರಾಪಂಚಿಕತೆಯ ಸೋಂಕಿನಿಂದ ತಪ್ಪಿಸಿ, ಅವರನ್ನು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿಸುತ್ತಿದ್ದರು. ಮತ್ತೆ ಅವರಿಗೆ ಪ್ರಾಪಂಚಿಕತೆಯು ತಗಲದಂತೆ ಶುದ್ಧ ವಾತಾವರಣದಲ್ಲಿರಿಸಿ ಅವರನ್ನು ರಕ್ಷಿಸುತ್ತಿದ್ದರು. ಅವರು ಇದೇ ಬೆಣ್ಣೆಯ ಉದಾಹರಣೆಯನ್ನು ಇನ್ನೊಂದು ಅರ್ಥದಲ್ಲಿ ನೀಡುತ್ತಿದ್ದರು: "ಮೊಸರನ್ನು ಕಡೆದು ಬೆಣ್ಣೆ ಮಾಡಿದ ಮೇಲೆ ಅದನ್ನು ಮಜ್ಜಿಗೆಯ ಪಾತ್ರೆಯಲ್ಲಿಯೇ ಇಡಬಾರದು. ಹಾಗೆ ಇಟ್ಟರೆ ಅದರ ಸವಿ ಕೆಡುತ್ತದೆ. ಅದನ್ನು ಶುದ್ಧವಾದ ನೀರಿನಲ್ಲಿ ಬೇರೊಂದು ಪಾತ್ರೆಯಲ್ಲಿ ಇಡಬೇಕು. ಇದರಂತೆಯೇ ಪ್ರಪಂಚದಲ್ಲಿದ್ದು ಸ್ವಲ್ಪ ಜ್ಞಾನವನ್ನು ಪಡೆದಮೇಲೆ ಒಬ್ಬನು ಪ್ರಪಂಚದಲ್ಲಿ ವಿಷಯವಸ್ತುಗಳ ಮಧ್ಯದಲ್ಲಿದ್ದರೆ ಅವುಗಳಿಂದ ಮಲಿನನಾಗಬಹುದು. ಅವುಗಳಿಂದ ದೂರವಾಗಿದ್ದಲ್ಲಿ ಒಬ್ಬನು ಶುದ್ಧನಾಗಿರಬಹುದು."

ಕೆಲವೊಮ್ಮೆ ತಮ್ಮ ಕೊನೆಯ ದಿನಗಳಲ್ಲಿ ಶ್ರೀರಾಮಕೃಷ್ಣರು ಈ ಹಾಲನ್ನು ನೀರಿನಿಂದ ಬೇರ್ಪಡಿಸುವ ಕೆಲಸದಿಂದ ಬೇಸರಪಟ್ಟಂತೆ ಕಂಡುಬರುತ್ತದೆ. ಹಾಲಿಗೆ ಸ್ವಲ್ಪ ನೀರು ಬೆರೆತಿದ್ದರೆ ಪರವಾಯಿಲ್ಲ, ಆದರೆ ನೀರೇ ಅಧಿಕವಾಗಿದ್ದು ಹಾಲಿನ ಅಂಶ ಕಡಿಮೆ ಇದ್ದರೆ, ಅದನ್ನು ನೀರಿನಿಂದ ಬೇರ್ಪಡಿಸಬೇಕಾದರೆ ಬಹಳ ಹೊತ್ತು ಅದನ್ನು ಕುದಿಸಬೇಕು, ಮತ್ತೆ ಮತ್ತೆ ಬೆಂಕಿಗೆ ಗಾಳಿ ಊದಿ ಅದನ್ನು ಉರಿಯುವಂತೆ ಮಾಡಬೇಕು. ಕೆಲವೊಮ್ಮೆ ಈ ರೀತಿ ಗಾಳಿ ಊದಿ ಊದಿ ಸುಸ್ತಾಗಿಬಿಡುತ್ತದೆ. ಅಂತಹ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಜಗನ್ಮಾತೆಗೆ ದೂರು ಹೇಳುವುದು ಕಂಡುಬರುತ್ತದೆ. ಆದರೆ ಇದು ಕೇವಲ ತಾತ್ಕಾಲಿಕ ಭಾವನೆ. ಅವರ ಜೀವಕಾರುಣ್ಯ ಎಷ್ಟು ತೀವ್ರವಾಗಿತ್ತೆಂದರೆ ತಮ್ಮ ಜೀವಿತದ ಕೊನೆಯವರೆಗೂ ಹಾಲನ್ನು ನೀರಿನಿಂದ ಬೇರ್ಪಡಿಸುವ ಕಾರ್ಯವನ್ನು ನಿಲ್ಲಿಸಲಿಲ್ಲ. ಅಷ್ಟೇ ಅಲ್ಲದೆ ಜೀವಿಗಳ ದುಃಖಶಮನಕ್ಕಾಗಿ ಎಷ್ಟು ಜನ್ಮವೆತ್ತಿ ಬರಲೂ ಅವರು ಸಿದ್ಧರಿದ್ದರು. ಅವರನ್ನು ನಾವು ಕಲ್ಪತರು ಎಂದು ಕರೆಯುತ್ತೇವೆ. ಆದರೆ ಅವರು ಕಾಮಧೇನುವೂ ಹೌದು—ಏಕೆಂದರೆ ಕಾಮಧೇನುವಿನಲ್ಲಿ ಮಾತೃವಾತ್ಸಲ್ಯ ಎದ್ದುಕಾಣುತ್ತದೆ. ಅವರು ಭಕ್ತರ ಅಭೀಷ್ಟವನ್ನು ನೆರವೇರಿಸುವುದು ಮಾತ್ರವಲ್ಲದೆ ವಾತ್ಸಲ್ಯದಿಂದ ಸಲಹುತ್ತಿದ್ದರು ಕೂಡ.

ಹೀಗೆ ಶ್ರೀರಾಮಕೃಷ್ಣರು ಕಾಮಧೇನುವೂ ಹೌದು, ಅದರ ಹಾಲೂ ಹೌದು, ಬೆಣ್ಣೆಯೂ ಹೌದು ಮತ್ತು ತುಪ್ಪವೂ ಹೌದು. ಅವರು ಒಂದೇ ಸತ್ಯದ ಅನೇಕ ರೂಪಗಳಾಗಿ ಕಾಣಿಸಿಕೊಳ್ಳುತ್ತಾರೆ. ❄

## ಜೀವಾನುಕಂಪ

ಶ್ರೀರಾಮಕೃಷ್ಣರು ಜ್ವರದಿಂದ ಮಲಗಿದ್ದರು. ಭಕ್ತನಾದ ರಾಮಚಂದ್ರದತ್ತನು ಅವರನ್ನು ನೋಡಲು ಬಂದನು ಮತ್ತು ಅವರಿಗಾಗಿ ಹೂಕೋಸನ್ನು ತಂದಿದ್ದನು. ಶ್ರೀರಾಮಕೃಷ್ಣರಿಗೆ ಅದನ್ನು ನೋಡಿ ಸಂತೋಷವಾಯಿತು. ಆದರೆ ಕೂಡಲೇ ಹೇಳಿದರು "ಅದನ್ನು ಬಚ್ಚಿಡು. ಹೃದಯನು (ಬಹಳಕಾಲ ಶ್ರೀರಾಮಕೃಷ್ಣರ ಸೇವೆ ಮಾಡಿದ ಅವರ ಸೋದರಳಿಯ) ನೋಡಿದರೆ ಸಿಟ್ಟಿಗೇಳುತ್ತಾನೆ."

ಅದರಂತೆ ಹೂಕೋಸನ್ನು ಬೇರೆ ಕಡೆ ಇಡಲಾಯಿತು. ಶ್ರೀರಾಮಕೃಷ್ಣರು ಹೃದಯನು ಮಾಡಿದ ಸೇವೆಯನ್ನು ಸ್ಮರಿಸಿಕೊಳ್ಳುತ್ತ ಆತನನ್ನು ಮನತುಂಬ ಪ್ರಶಂಸಿಸತೊಡಗಿದರು. ಅದೇ ಸಂದರ್ಭದಲ್ಲಿ ಹೃದಯನು ಕೊಠಡಿಯನ್ನು ಪ್ರವೇಶಿಸಿದ. ಹೇಗೋ ಹೂಕೋಸು ಅವನ ಕಣ್ಣಿಗೆ ಬಿತ್ತು. ಶ್ರೀರಾಮಕೃಷ್ಣರು ಆತಂಕದಿಂದ ದೈನ್ಯಭಾವದಲ್ಲಿ ಹೇಳತೊಡಗಿದರು: "ನಾನು ಅದನ್ನು ತರಲು ಅವನಿಗೆ ಹೇಳಲಿಲ್ಲ. ಅವನಾಗಿಯೇ ತಂದಿದ್ದಾನೆ. ನನ್ನ ಮಾತನ್ನು ನಂಬು."

ಆದರೆ ಹೃದಯನು ಕೋಪೋದ್ರಿಕ್ತನಾಗಿ ಶ್ರೀರಾಮಕೃಷ್ಣರನ್ನು ಚೆನ್ನಾಗಿ ಬೈದನು. ಶ್ರೀರಾಮಕೃಷ್ಣರ ದೇಹಸ್ಥಿತಿಗೆ ಹೂಕೋಸು ಸರಿಹೋಗುವುದಿಲ್ಲವೆಂದು ವೈದ್ಯರು ಅದನ್ನು ಅವರು ತಿನ್ನಬಾರದೆಂದು ಹೇಳಿದ್ದರು. ಆದ್ದರಿಂದಲೇ ಹೃದಯನಿಗೆ ಹೂಕೋಸನ್ನು ನೋಡಿದ ಕೂಡಲೇ ಕೋಪ ತಡೆಯಲಾಗಲಿಲ್ಲ.

ಶ್ರೀರಾಮಕೃಷ್ಣರು ಕಣ್ಣೀರು ಸುರಿಸುತ್ತ ಜಗನ್ಮಾತೆಗೆ ಹೇಳತೊಡಗಿದರು: "ತಾಯಿ, ನೀನು ನನ್ನನ್ನು ಎಲ್ಲ ಪ್ರಾಪಂಚಿಕ ಬಂಧನಗಳಿಂದ ಬಿಡಿಸಿರುವೆ. ಆದರೂ ಹೃದಯನು ಈ ರೀತಿ ಅವಮಾನಗೊಳಿಸಲು ಅವಕಾಶ ಕೊಟ್ಟಿದ್ದೀಯೆ."

ಕೂಡಲೆ ಅವರ ಭಾವ ಬದಲಾಯಿತು. ಅವರು ಮುಗುಳ್ನಕ್ಕು ಹೇಳಿದರು: "ತಾಯಿ, ಅವನು ನನ್ನನ್ನು ಬೈಯುವುದು ನನ್ನ ಮೇಲಿನ ಪ್ರೀತಿಯಿಂದಲೆ. ಅವನಿನ್ನೂ ಹುಡುಗ. ತಾನೇನು ಮಾಡುತ್ತಿರುವೆನೆಂದು ಅವನಿಗೆ ತಿಳಿಯದು. ತಾಯಿ, ನೀನು ಅವನ ಮೇಲೆ ಕೋಪಿಸಿಕೊಳ್ಳಬೇಡ." ಹೀಗೆ ಹೇಳುತ್ತಿದ್ದಂತೆಯೇ ಶ್ರೀರಾಮಕೃಷ್ಣರಿಗೆ ಸಮಾಧಿ ಉಂಟಾಯಿತು.